ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು ನೃಪತುಂಗ ರಸ್ತೆ, ಬೆಂಗಳೂರು–01.

ಸಂಖ್ಯೆ: ದೈಶಿ/ಫಿಟ್ ಇಂಡಿಯಾ/2019–20 ದಿನಾಂಕ : 10.12.2019

## ಸುತ್ತೋಲೆ

ವಿಷಯ:– ಫಿಟ್ ಇಂಡಿಯಾ ಸ್ಕೂಲ್ ಸಪ್ತಾಹ ಕಾರ್ಯಕ್ರಮ ಆಚರಣೆ ಕುರಿತು.

ಉಲ್ಲೇಖ:– 1. Director General Sports Authority of India, New Delhi ರವರ ಪತ್ರ ಸಂಖ್ಯೆ:13(WK) 2019–20 ದಿನಾಂಕ:23.10.2019.

2. ದಿನಾಂಕ:06–12–2019ರಂದು ಮಾನ್ಯ ಪ್ರದಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ರವರು ಸಭೆಯಲ್ಲಿ ಸೂಚಿಸಿದಂತೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) Director General Sports Authority of India, New Delhi ರವರ **'ಫಿಟ್ ಇಂಡಿಯಾ ಸ್ಕೂಲ್ ಸಪ್ತಾಹ ಕಾರ್ಯಕ್ರಮ'** ವನ್ನು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ದಿನಾಂಕ : 16.12.2019 ರಿಂದ 21.12.2019 ರವರೆಗೆ 07 ದಿನಗಳ ಕಾಲ ಹಮ್ಮಿಕೊಳ್ಳಲು ತಿಳಿಸಿರುತ್ತಾರೆ. ಸದರಿ ಸಪ್ತಾಹದ ಪ್ರಮುಖ ಉದ್ದೇಶವೇನೆಂದರೆ ಶಾಲೆಯಲ್ಲಿ ಎಲ್ಲಾ ಮಕ್ಕಳನ್ನು ಕ್ರೀಡೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿ ವಿದ್ಯಾರ್ಥಿಗಳನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಡಗೊಳಿಸುವುದಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಈ ಕೆಳಕಂಡ ಕ್ರಮ ಕೈಗೊಳ್ಳಲು ತಿಳಿಸಿದೆ :

1) ಫಿಟ್ ಇಂಡಿಯಾ ಒಂದು ವಾರದ ಶಾಲಾ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ದಿನಾಂಕ:16–12–2019 ರಿಂದ 21–12–2019 ರವರೆಗೆ ಕಡ್ಡಾಯವಾಗಿ ಹಮ್ಮಿಕೊಳ್ಳವುದು. 6 ದಿನಗಳ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿದೆ :

| ಕ್ರ.ಸಂ | ದಿನಾಂಕ | ವಾರ | ಚಟುವಟಿಕೆಯ ವಿವರ |
|---|---|---|---|
| 01 | 16-12-2019 | ಸೋಮವಾರ | 1. ಬೆಳಗಿನ ಪ್ರಾರ್ಥನಾ ಅವಧಿಯ ನಂತರ ಎಲ್ಲಾ ಮಕ್ಕಳಿಗೆ ಯೋಗ ಮಾಡಿಸುವುದು.<br>2. ಸಧೃಢ ದೈಹಿಕ, ಮಾನಸಿಕ ಬೆಳವಣಿಗೆಯ ಅವಶ್ಯಕತೆ ಹಾಗೂ ಉತ್ತಮ ಪೋಷಕಾಂಶಯುತ್ತ ಆಹಾರ ಸೇವನೆ ಬಗ್ಗೆ ಮಕ್ಕಳಲ್ಲಿ ಹಾಗೂ ಶಿಕ್ಷಕರಲ್ಲಿ ಅರಿವು ಮೂಡಿಸುವುದು. |
| 02 | 17-12-2019 | ಮಂಗಳವಾರ | 1. ಬೆಳಗಿನ ಪ್ರಾರ್ಥನಾ ಅವಧಿಯ ನಂತರ ಎಲ್ಲಾ ಮಕ್ಕಳನ್ನು ಒಳಗೊಂಡಂತೆ ಸರಳ ವ್ಯಾಯಾಮಗಳನ್ನು ಮಾಡಿಸುವುದು.<br>2. ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಗಾಗಿ ಕ್ರೀಡೆ ಕುರಿತು ಚರ್ಚೆಗಳ ವಿಚಾರಗೋಷ್ಠಿ ಉಪನ್ಯಾಸಗಳನ್ನು ಏರ್ಪಡಿಸುವುದು. |
| 03 | 18-12-2019 | ಬುಧವಾರ | 1. ಖೇಲೊ ಇಂಡಿಯಾ ಆಫ್ ಬಳಸಿ ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯದ ಮೌಲ್ಯಮಾಪನ ಪ್ರಾರಂಭಿಸುವುದು,<br>2. ಎಲ್ಲಾ ವಿದ್ಯಾರ್ಥಿಗಳಿಗೆ ಸಧೃಢ ದೇಹ, ಸಧೃಢ ಮನಸ್ಸು ಮತ್ತು ಉತ್ತಮ ಪರಿಸರ ಕುರಿತು ಭಿತ್ತಿಪತ್ರ ರಚನಾ ಸ್ಪರ್ಧೆಗಳನ್ನು ಏರ್ಪಡಿಸುವುದು. |
| 04 | 19-12-2019 | ಗುರುವಾರ | 1. ಶಾಲಾ ಮಕ್ಕಳಿಂದ ಯೋಗ, ಕರಾಟೆ, ಸ್ಕಿಪ್ಪಿಂಗ್, ಶಾಲಾ ಕೈತೋಟ ನಿರ್ವಹಣೆ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.<br>2. ಮಕ್ಕಳಿಗೆ ಫಿಟ್ ಇಂಡಿಯಾ ಶಾಲೆ ಕುರಿತು ಪ್ರಬಂಧ ಸ್ಪರ್ಧೆ,<br>3. ಪದ್ಯ ಬರವಣಿಗೆ ಸ್ಪರ್ಧೆಗಳನ್ನು ಏರ್ಪಡಿಸುವುದು. |
| 05 | 20-12-2019 | ಶುಕ್ರವಾರ | 1. ಫಿಟ್ ಇಂಡಿಯಾ ಶಾಲೆ ಕಾರ್ಯಕ್ರಮ ಕುರಿತು ಕ್ರೀಡಾ ರಸ ಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. |
| 06 | 21-12-2019 | ಶನಿವಾರ | 1. ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರನ್ನು ಒಳಗೊಂಡಂತೆ ಎಲ್ಲರಿಗೂ ಸಾಂಪ್ರದಾಯಿಕ ಕ್ರೀಡೆಗಳು, ಪ್ರಾದೇಶಿಕ ಕ್ರೀಡೆಗಳನ್ನು ಏರ್ಪಡಿಸುವ ಮೂಲಕ ವಿವಿಧತೆಯಲ್ಲಿ ಏಕತೆಯನ್ನು ಬಲಪಡಿಸಬೇಕು.<br>2. ಮಕ್ಕಳು, ಪೋಷಕರು ಹಾಗೂ ಶಿಕ್ಷಕರು ಭಾಗವಹಿಸುವ ಐತಿಹಾಸಿಕ ಸ್ಥಳೀಯ ಕ್ರೀಡೆಗಳ ಬಗ್ಗೆ ಆಸಕ್ತಿ ಮೂಡಿಸುವುದು. |

ಫಿಟ್ ಇಂಡಿಯಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 6 ದಿನಗಳಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಸಂಬಂಧಿಸಿದ ಶಾಲೆಯ ಮುಖ್ಯೋಪಾಧ್ಯಾಯರು ಆಯಾ ದಿನಗಳ ಕಾರ್ಯಕ್ರಮದ ಒಂದೊಂದು ಭಾವಚಿತ್ರಗಳನ್ನು ಈ ಕಛೇರಿಯ ಇ–ಮೇಲ್ ವಿಳಾಸ jdpevkn@gmail.com ಗೆ ಕಳುಹಿಸುವುದು. ಅಂತರ್‌ಜಾಲದ ವ್ಯವಸ್ಥೆಯುಳ್ಳ ಶಾಲೆಗಳ ತಮ್ಮ ಶಾಲೆಯಲ್ಲಿಯಿಂದಲೇ ಭಾವಚಿತ್ರಗಳನ್ನು ಕಳುಹಿಸುವುದು. ಅಂತರ್‌ಜಾಲ ವ್ಯವಸ್ಥೆ ಹೊಂದಿರದ ಶಾಲೆಗಳು ಸಂಬಂಧಿಸಿದ ಬಿ.ಆರ್.ಸಿ. ಅಥವಾ ಬಿ.ಇ.ಓ. ಕಛೇರಿಗಳಲ್ಲಿ ಲಭ್ಯವಿರುವ ಅಂತರ್‌ಜಾಲ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ಭಾವಚಿತ್ರವನ್ನು ಕಳುಹಿಸುವುದು.

2) ಪ್ರತಿಯೊಂದು ಶಾಲೆಯು ಫಿಟ್ ಇಂಡಿಯಾ ಶಾಲೆಗಳಾಗಿ ನಮೂದಿಸಲು ಈ ಕೆಳಕಂಡ ಮಾನದಂಡಗಳನ್ನು ಹೊಂದಿರಬೇಕು :

- ಶಾಲೆಗಳಲ್ಲಿ ದೈಹಿಕ ಶಿಕ್ಷಣ ತರಬೇತಿ ಪಡೆದಿರುವ ಒಬ್ಬ ಶಿಕ್ಷಕರು ಮತ್ತು ಕ್ರೀಡೆಯಲ್ಲಿ ಆಸಕ್ತಿ ಹೊಂದಿರುವ ಮತ್ತೊಬ್ಬ ಶಿಕ್ಷಕರಿರಬೇಕು.
- ಶಾಲೆಯಲ್ಲಿ ಆಟದ ಮೈದಾನವಿರಬೇಕು, ಮೈದಾನದಲ್ಲಿ 2 ಅಥವಾ 2ಕ್ಕಿಂತ ಹೆಚ್ಚು ಆಟಗಳನ್ನು ಆಡಿಸುವಷ್ಟು ಸ್ಥಳಾವಕಾಶವಿರಬೇಕು.
- ಪ್ರತಿದಿನ ಶಾಲೆಯಲ್ಲಿ ದೈಹಿಕ ಶಿಕ್ಷಣ ಚಟುವಟಿಕೆಗಳನ್ನು ಮಾಡಿಸಲು ಪ್ರತಿ ತರಗತಿಗೆ ಒಂದು ಅವಧಿಯಲ್ಲಿ ಯಾವುದಾದರು ಒಂದು ಪಂದ್ಯಾಟಗಳು, ಡ್ಯಾನ್ಸ್ (ನೃತ್ಯ), ಯೋಗಾಸನ, ಏರೋಬಿಕ್ಸ್ ವ್ಯಾಯಾಮಗಳು, ಪದಕವಾಯತು (ಪಥ ಸಂಚಲನ) ಯಾವುದೇ ಇತರೆ ತಾಳಬದ್ದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು.
- ಶಾಲೆಯಲ್ಲಿನ ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ 60 ನಿಮಿಷಗಳು ಸಾಮೂಹಿಕವಾಗಿ ದೈಹಿಕ ಚಟುವಟಿಕೆಗಳನ್ನು ಪ್ರತಿದಿನ ಮಾಡಿಸುವುದು.

ಮೇಲಿನ ಸೌಕರ್ಯಗಳನ್ನು ಹೊಂದಿರುವ ಪ್ರತಿಯೊಂದು ಶಾಲೆಯು **'ಫಿಟ್ ಇಂಡಿಯಾ ಶಾಲೆ'** ಎಂಬುದಾಗಿ ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ನೊಂದಣಿಯನ್ನು ಕೇಂದ್ರ ಸರ್ಕಾರದ www.fitindia.gov.in ವೆಬ್‌ಸೈಟ್ ನಲ್ಲಿ ಡಿಸೆಂಬರ್ ಅಂತ್ಯದೊಳಗಾಗಿ ಮಾಡಿಸುವುದು.

ಫಿಟ್ ಇಂಡಿಯಾ ಕಾರ್ಯಕ್ರಮದ ಅನುಷ್ಠಾನಕ್ಕಾಗಿ **"ಫಿಟ್ ಇಂಡಿಯಾ ಆಂದೋಲನ - ಫಿಟ್ ಇಂಡಿಯಾ ಸ್ಕೂಲ್"** ಕುರಿತ ಮಾರ್ಗಸೂಚಿಯನ್ನು ಈ ಸುತ್ತೋಲೆಯೊಂದಿಗೆ ಅಡಕಗೊಳಿಸಿದೆ. ಮಾರ್ಗಸೂಚಿಯಲ್ಲಿನ ಸೂಚನೆಗಳಂತೆ ಕಾರ್ಯಕ್ರಮವನ್ನು ನಿಯಮಾನುಸಾರ ಹಮ್ಮಿಕೊಳ್ಳುವುದು. ಹಾಗೂ ಈ ಕಾರ್ಯಕ್ರಮವನ್ನು ಹಮ್ಮಿಕೊಂಡ ಬಗ್ಗೆ ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು ತಮ್ಮ ವ್ಯಾಪ್ತಿಯ ಎಲ್ಲಾ ತಾಲ್ಲೂಕುಗಳಿಂದ ಮಾಹಿತಿಯನ್ನು ಕ್ರೋಢೀಕರಿಸಿ ಈ ಸುತ್ತೋಲೆಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಭರ್ತಿ ಮಾಡಿ ದಿನಾಂಕ : 23.12.2019 ರೊಳಗಾಗಿ ಇ-ಮೇಲ್ ವಿಳಾಸ jdpevkn@gmail.com ಗೆ ಸಾಫ್ಟ್ ಪ್ರತಿಯನ್ನು ಹಾಗೂ ಸಹ ನಿರ್ದೇಶಕರು (ದೈಹಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು, ಇವರಿಗೆ ಹಾರ್ಡ್ ಪ್ರತಿಯನ್ನು ಸಲ್ಲಿಸುವುದು.

10/12/19

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ :

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಬಿ.ಆರ್.ಸಿ. ಗಳಿಗೆ (ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)
5. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರಿಗೆ (ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

**ಪ್ರತಿಯನ್ನು :**

1 ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.

2. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.